। ಹರಿಃ ಓಂ ।

## ಆರು ದಯಮಾಡ್ಯಾರು ಕೃಷ್ಣ

ಆರು ದಯಮಾಡ್ಯಾರು ಕೃಷ್ಣ ಆದರಿಸಿ ನಿನ್ನಂತೆ
ವಾರಿಜನಾಭ ನಾರದಪ್ರಿಯನೇ
ಕರಿ ಮಕರಿಗೆ ಸಿಲುಕಿ ಕಷ್ಟದಲಿ ಸ್ಮರಿಸಲು
ಅರಿತು ಸಲಹಿದೊ ನೀನೆ ಅತಿ ವೇಗದಿ
ಸ್ವರ್ಣಕಶ್ಯಪು ಮತ್ತೆ ಹಿತವಿಲ್ಲದೆ ಮಗನ
ಹರಿನುಡಿಯ ಬ್ಯಾಡೆಂದು ಹತಮಾಡುತಿರೆ ಕಾಯಿದೆ
ನೊಂದ ವಿಭೀಷಣನು ಸ್ತುತಿಮಾಡಲು ಅವನ
ಕುಂದುಗಳನೆಣಿಸದೆ ಕೈಪಿಡಿದೆ ಕರುಣದಲಿ
ಹಿಂದೆ ಕುಲಹೀನನಾದ ಅಜಮಿಳ ತನ್ನ
ಕಂದ ನಾರಗನೆನಲು ಗತಿಯಿತ್ತೆ ಅಂತ್ಯದಲಿ
ಪಗಡೆಯಲಿ ಪಾಂಡವರ ಕೌರವರು ಸೋಲಿಸೆ
ಹಗೆಯಿಂದ ದ್ರೌಪದಿಯ ಹತ ಮಾಡುತಿರೆ ಕಾಯಿದೆ
ಮಿಗೆ ವೈರಾಗ್ಯದಲಿ ಒದಗಿ ಧ್ರುವ ಸ್ಮರಿಸಲು
ಮೃಗನರಾಕಾರರೂಪ ಸಿರಿಕೃಷ್ಣ ರಕ್ಷಿಸಿದೊ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಇದು ಬಲು ಸುಖ ಕಾಣೆ

ಇದು ಬಲು ಸುಖ ಕಾಣೆ ಕೇಳಿದಕೆನೆಯುನು ನಾ ಕಾಣೆ
ಒದಗಿ ಬರುವ ಮೃತ್ಯುವ ಪರಿಹರಿಸುವ
ಪದುಮನಾಭನ ಪದಪದುಮಕ್ಕೆರಗುವ
ಚಂಚಲ ಸಿರಿಗಾಗಿ ಲೋಕ
ಪ್ರಪಂಚಕೆ ಬೆರಗಾಗಿ

ಸಂಚಿತ ಕರ್ಮವ ಕಳೆಯದೆ ಕಾರ್ಯವು
ಮಿಂಚಿದ ಬಳಿಕಾಯಾಸಕ್ಕಿಂತಲು
ಚಿಂತೆಯೆಲ್ಲವ ಕಳೆದು ಮನದಿ
ನಿಶ್ಚಿಂತೆಯಾಗಿ ನಲಿದು
ಅಂತರಂಗದಿ ಲಕ್ಷ್ಮೀಕಾಂತನ ತುತಿಸುತ
ಸಂತೋಷಶರಧಿಯೊಳೋಲ್ಯಾಡುವುದು
ಶರಣ ಜನರ ಪೊರೆವ ದ್ವಾರಕಾ
ಪುರವರದಲಿ ನಮ್ಮ ಸಿರಿಕೃಷ್ಣರಾಯನ
ಮುರಳೀಧರನ ಸೇವಿಸಿ ಸುಖಿಯಾಗುವ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಏಕಾರತಿಯ ನೋಡುವ ಬನ್ನಿ

ಏಕಾರತಿಯ ನೋಡುವ ಬನ್ನಿ ನಮ್ಮ
ಏಕೋಭಾವದಲಿ ರಂಗನ ಪೂಜೆಯ
ಕಣ್ಣುಕೆಕ್ಕರಿಸಿ ನೋಡುತಲಿ ಸಂಹರಿಸಿ ತಾನು
ಬೆನ್ನಲಿ ಭೂಮಿಯ ಪೊತ್ತವನ
ಚೆನ್ನಿಗ ಚೆಲುವ ದಾಡೆಗಳಿಂದ ಮರ್ದಿಸುವ
ದಾನವನ ಕೊಂದ ದಯಾಂಬುಧಿಗೆ
ವಾಮನ ರೂಪಿಲಿ ಮೂರಡಿ ಮಾಡಿದ
ಪ್ರೇಮದಲಿ ಕೊಡಲಿಯ ಪಿಡಿದವಂಗೆ
ಹಮ್ಮು ತಾಳಿದ ಹತ್ತು ತಲೆಗಳಳಿದ ತರುಣಿ
ರುಕ್ಮಿಣಿಯ ಕೈಯ ಪಿಡಿದ ಶ್ರೀಹರಿಗೆ
ತಿರುಗುವ ತ್ರಿಪುರವ ಮೂರೆಡೆಮಾಡಿದ
ತುರಗವನೇರಿ ತರಿದವಂಗೆ
ಉರಗಶಯನ ಮುದ್ದು ಉಡುಪಿನ ಕೃಷ್ಣಗೆ
ಗರುಡಗಮನ ಶ್ರೀ ಗೋಪಾಲ ಹರಿಗೆ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಎಂದು ಮಾತು ಚಂದವಾಯಿತಿಂದು ಗೋಪಿ

ಎಂದು ಮಾತು ಚಂದವಾಯಿತಿಂದು ಗೋಪಿ
ಮುನಿಸಿಂದ ನಮ್ಮನಾಡಲೇಕೆ ನಂದರೊಪಿ
ಬಂಟನಂಟರನ್ನು ಮಾತಿನಿಂದ ಹೋಗಿ ಬರಿ
ಕಂಟಕದ ನುಡಿಗಳಿನ್ಯಾಕೆ ಗೋಪಿ
ಕರಿಯಬಂಟ ಕಳ್ಳಕೃಷ್ಣ ಕಾಣೆ
ಹತ್ತಿಲಿರುವ ಹರಿಯು ಬಲುತುಂಟ ಕಾಣೆ ಗೋಪಿ
ಹರವಿ ಹಾಲ ಬರಿದು ಮಾಡಿ ಬಂದ ಗೋಪಿ
ಎನ್ನ ಸೆರಗ ಪಿಡಿದು ಬಿಡೆನೆಂದ ಕಾಣೆ ಗೋಪಿ
ಅಪರಿಮಿತದಾಟಗಾರನಿವನೆ ಹೋಪಿ
ಕೃಷ್ಣ ಕಪಟನಾಟಕಸೂತ್ರಧಾರ ಗೋಪಿ
ತಿರುಪತಿಯ ತಿಮ್ಮರಾಯನಿವನೆ ಗೋಪಿ
ಗೊಲ್ಲ ಗರತಿಯರ ಕಂಡರೆ ಸುಪ್ರೀತ ಗೋಪಿ
ಶರಣಜನರ ಸಿದ್ಧಿಕೊಡುವ ದಾತ ಗೋಪಿ
ನಾವು ಪುರದೊಳಿರುವ ತೆರನ ಮಾಡೆ ಜಾಣೆ ಗೋಪಿ
ನಿಪುಣ ಬೆಣ್ಣೆಕಳ್ಳ ನಿನ್ನ ಮಗನೆ ಗೋಪಿ
ನಮ್ಮ ತಪಸಿಗೊಲಿದು ಜನಿಸಿದ ಶ್ರೀಕೃಷ್ಣ ಗೋಪಿ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಎನ್ನಮನ ಕಂಡಕಡೆಗೆ ಎರಗುತಿದೆ

ಎನ್ನಮನ ಕಂಡಕಡೆಗೆ ಎರಗುತಿದೆ
ನಿನ್ನಲ್ಲಿ ನಿಲಿಸಿ ಕಾಯೊ
ಚಕ್ಷುರಿಂದ್ರಿಯಗಳಿಂದ ಚದುರೆಯರ
ಈಕ್ಷಿಸಿ ನೊಂದೆನಯ್ಯ
ಶಿಕ್ಷಕನು ನೀ ಎನಗೆ ಸಿರಿಯರಸ

ಭಕುತರೊಳಿಟ್ಟು ಕಾಯೊ
ಶ್ರೋತ್ರೇಂದ್ರಿಯಗಳಿಂದ ಸತತ
ದುರ್ವಾರ್ತೆಗಳ ಕೇಳಿ ಕೆಟ್ಟೆ
ಕರ್ತೃ ನೀ ಎನಗೆ ನಿನ್ನಯ ಕಥೆಗಳನು
ಅರ್ತಿಯಿಂದೊರೆದು ಕಾಯೋ
ಘ್ರಾಣೇಂದ್ರಿಯಗಳಿಂದ ದುರ್ಗಂಧಗಳ
ಆಘ್ರಾಣಿಸಿ ನೊಂದೆನಯ್ಯ
ಪ್ರಾಣೇಶ ನಿನಗರ್ಪಿತ ಪರಿಮಳವ
ಮಾಣದೆನಗಿತ್ತು ಕಾಯೋ
ರಸನೇಂದ್ರಿಯಗಳಿಂದ ಷಡ್ರಸಗಳನು
ಹಸಿದು ನಾ ಸೇವಿಸಿದೆನೊ
ಬಿಸಜಾಕ್ಷ ನೀನು ಸವಿದ ಪದಾರ್ಥವನು
ಆಸ್ವಾದಿಸೆನಗೆ ದೇವ
ತ್ವಗೇಂದ್ರಿಯದಿ ತಾಮಸದಿ
ಸೋಕಿ ನಾ ಕೆಟ್ಟೆನಯ್ಯ
ಸಿಕ್ಕಗೊಡದೆ ಇಂದ್ರಿಯಗಳಿಗೆ ಸಿರಿಕೃಷ್ಣ
ಮುಕ್ತರೊಳಗಿಟ್ಟು ಕಾಯೊ

**। ಶ್ರೀ ಕೃಷ್ಣಾರ್ಪಣ ಮಸ್ತು ।**

। ಹರಿಃ ಓಂ ।

## ಏನು ಬೇಡಲೊ ನಿನ್ನ ದೇವಾಧಿದೇವ

ಏನು ಬೇಡಲೊ ನಿನ್ನ ದೇವಾಧಿದೇವ
ಏನಿಹುದೊ ನಿನ್ನೊಳಗೆ ಮಹಾನುಭಾವ
ಮನೆಯ ಬೇಡಲೆ ವನಧಿ ಹಾಸಿಗೆಯು ವಟಪತ್ರ
ವನಿತೆಯರ ಬೇಡಲೆ ಬ್ರಹ್ಮಚಾರಿ
ಘನಸುಖ್ಯವನು ಬಯಸೆ ನೆನೆಯುವರ ಮನದಲಿಹೆ
ತಿನುವುದಕೆ ಕೇಳುವೆನೆ ನವನೀತಚೋರ
ಒಡವೆಗಳ ಬಯಸೆ ಶಿಖಿಪಿಂಛ ತುಳಸಿಪತ್ರ

ಕಡುಸ್ಸೈನ್ಯವನೆ ಬಯಸೆ ಗೋಪಾಲನು
ಬಿಡದೆ ರೂಪವ ಬಯಸೆ ನೀಲಮೇಘಶ್ಯಾಮು
ಉಡುವುದಕೆ ಕೇಳುವೆನೆ ಸ್ತ್ರೀ ವಸನಚೋರ
ಶಕ್ತಿಯನು ಗೋಪಿಕಾಸ್ತ್ರೀಯರಲಿ ವ್ಯಯಗೈದೆ
ಭಕ್ತಿಯನು ಸತ್ಯವಂತರಿಗಿತ್ತಿಹೆ
ಭಕ್ತರನು ವಂಚಿಸುತ ನೀನು ಬಚ್ಚಿಟ್ಟಿರುವ
ಮುಕ್ತಿಕಾಂತೆಯ ಕೊಡು ಸುಖಿಪೆನೊ ಶ್ರೀಕೃಷ್ಣ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಹೀಂಗಿರಲಾರೆ ನಿನ್ನಾಣೆ

ಹೀಂಗಿರಲಾರೆ ನಿನ್ನಾಣೆ ಕಂಗಳು ಪಡೆದ ಫಲವ
ರಂಗ ಕೊಳಲನೂದೆ ಗೋ
ಪಾಂಗನೆಯರೆಲ್ಲ ನೆರೆದು ಸಂಗಡ ಲೋಲಾಡುತಿಪ್ಪುದ
ಏಣಲೋಚನೆ ಕೇಳವ್ವ ದಾನವಾಂತಕನ ಕೈಯ
ವೇಣು ಮಾಡಿದ ಸುಕೃತ ಫಲವ ಪ್ರಾಣದೊಲ್ಲಭೆಯರೆಲ್ಲ
ಮಾಣದೆ ಸವಿವ ಅಧರಪಾನವ ತಾಸೂರೆಗೊಂಬುದ
ತಾನು ನೆಲೆಸಿಹ ವೃಕ್ಷಮೂಲಗಳೇನು
ಸುಕೃತ ಮಾಡಿದುವೋ ಭೂಲತಾವನದಾ
ಪುಣ್ಯಗಳನೇನೆಂಬೆ
ನಾನು ಮಾಡಿದ ಪೂರ್ವ ಸಂಚಿತ
ಏನು ಒದಗಿತೊ ಕೃಷ್ಣರಾಯನ
ವೇಣುಗೀತಾಮೃತ ವ ಸವಿವರೆ
ಹುಲ್ಲೆಯ ಹಿಂಡುಗಳೆಲ್ಲ ಪುಲ್ಲನಾಭನ
ಕೊಳಲ ಧ್ವನಿಯ ಸೊಲ್ಲನಾಲೈಸುತ ವೇಗದಿ
ಚೆಲ್ಲಗಂಗಳೇರಂತೆ ಕೃಷ್ಣನಲ್ಲಿ ಚಿತ್ತವೆರಗಿ
ಅನ್ಯವಿಲ್ಲದಪ್ಪ ಸಡಗರವನ್ನು
ಪಲ್ಲವಾರುಣ ಪಾಣಿಯಿಂದ

ಮೆಲ್ಲನೆ ಮಧುರಗೀತವ
ಕಲ್ಲುಕರಗುವಂತೆ ಹಾಡಲು
ಹುಲ್ಲು ಮೇವ ತುರುಗಳೆಲ್ಲ
ತಲ್ಲಣದಿಂದಲಿ ಬಂದು
ವಲ್ಲಭೆಯರಂತೆ ನೋಡಲು
ಅರಗಿಳಿ ಹಂಸಗಳೆಲ್ಲ ತರುಗಳ ಕೊಂಬೆಗಳನೇರಿ
ಪರಮ ಹರುಷದಿ ಕುಳಿತು ಕೊರಳ ಕಲರವಗಳನುಳುಹಿ
ಪರಮ ಪುರುಷನ ಧ್ಯಾನದಿಂದ ಯೋಗಿಗಳ ತೆರದಿ ಮೈಮರೆದು
ಕರಗಿ ಕಂಬನಿಗಳನೆ ಸುರಿಸುತ
ಸರಸಿಜಾಕ್ಷನ ವೇಣುಗೀತದ
ಸ್ವರಗಳನಾರೈದು ಬಾಹ್ಯವ
ತೊರೆದು ಯೋಗಿಗಳಂತೆ ಕುಳ್ಳಿರ್ದು
ಪರಮಹಂಸರಂತೆ ಜಗವ
ಮರೆದು ಕೃಷ್ಣನ ಪಾದಯುಗಳದ
ಸರಸಿಜದೊಳೋಲಾಡುವ ಸುಖವ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಕಾಳಿಂಗನ ಮೆಟ್ಟಿ ನಾಟ್ಯವಾಡಿದ ಕಂಜನಾಭ ಕೃಷ್ಣನು

ಕಾಳಿಂಗನ ಮೆಟ್ಟಿ ನಾಟ್ಯವಾಡಿದ ಕಂಜನಾಭ ಕೃಷ್ಣನು
ಕಾಳಿಂಗನ ಮೆಟ್ಟಿ ಆಡಿದ ಭರದಲ್ಲಿ
ಶ್ರೀವತ್ಸ ಉರದಲ್ಲಿ ಕೊರಳಲ್ಲಿ ವನಮಾಲೆ
ತರಳನದಲಿ ಯಮುನೆಯ ಮಡುವಿನಲ್ಲಿ
ಕಾಲಲ್ಲಿ ಗೆಜ್ಜೆ ಘಲು ಘಲು ಘಲುಕೆಂದು
ಕರ್ಣಕುಂಡಲವು ಥಳಥಳ ಥಳಕೆಂದು
ಫಾಲತಿಲಕವು ಹೊಳೆ ಹೊಳೆ ಹೊಳೆವುತ
ಜ್ವಲಿತ ಮಣಿಮಯ ಲಲಿತ ಪದಕಹಾರ
ಚಲಿತ ಕಾಂತಿ ಬೆಳಗೆ ದಿಕ್ಕುಗಳನ್ನೆಲ್ಲ
ಸುರರು ದುಂದುಭಿಯ ಧಣ ಧಣ ಧಣರೆಂದು

ನೆರೆದು ತಾಳಗಳು ಝುಣಝುಣ ಝುಣರೆಂದು
ಹರಬ್ರಹ್ಮ ಪುರುಹೂತ ತಾಥೈ ತಾಥೈಯೆನಲು
ನಾರದರು ತುಂಬುರರು ಸಿದ್ಧರು ವಿದ್ಯಾಧರರು ಅ
ಪ್ಸರರು ಅಂಬರದಲಿ ಆದುತ ಪಾಡುಲು
ಯೋಗಿಗಳೆಲ್ಲ ಜಯ ಜಯ ಜಯವೆಂದು
ಭೋಗಿಗಳೆಲ್ಲ ಭಯ ಭಯ ಭಯವೆಂದು
ನಾಗಕನ್ನೇರಭಯ ಅಭಯವೆನಲು
ಜಗದೀಆಶ ಶ್ರೀಕೃಷ್ಣ ಜನನಿಯ ಕಂಡೊಡೆ
ಧಿಗಿಧಿಗುನೆ ಬಂದು ಬಿಗಿಬಿಗಿದಪ್ಪಿದ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಸ್ಮರಣೆ ಒಂದೇ ಸಾಲದೆ ಗೋಪಾಲನ

ಸ್ಮರಣೆ ಒಂದೇ ಸಾಲದೆ ಗೋಪಾಲನ
ಪರಿಪರಿಸಾಧನ ಭ್ರಂತಿಯ ತಿಳಿದು
ಪರಮತಾರಕನೆಂದು ನೆರೆ ನಂಬಿದಾತಗೆ
ಪಾತಕನಾದಡೇನು ಸರ್ವಪ್ರಾಣ ಘತಕನಾದಡೇನು
ಕೈತವಧರ್ಮದ ಕಲುಷಿಯಾದಡೇನು
ತಾತಪ್ಯಮಾನ ಹೃದಯನಾದ ಮನುಜಂಗೆ
ಕಡುಮೂರ್ಖನಾದಡೇನು ದುಸ್ಸಂಗದೊಳ್
ತೂಡರ್ದಾತನಾದಡೇನು
ಜಡನಾದಡೇನಲ್ಪಜಾತಿಯಾದಡೇನು
ಒಡನೆ ಪ್ರಹ್ಲಾದನ್ನುದ್ಧರಿಸಿದ ಹರಿನಾಮ
ಸಕಲ ತೀರ್ಥಫಲಂಗಳ ಸದ್ಗುಣದೊಳು
ಸುಕರದಿಂದೆಸಗುತಿಪ್ಪ
ಸಕಲಧರ್ಮಂಗಳ ಸಾದ್ಗುಣ್ಯವನು ಮಾಳ್ಪ
ಪ್ರಕರ್ಷ ಬಾಲಗೋಪಾಲ ಕೃಷ್ಣನ ದಿವ್ಯ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಸಂಗವಾಗಲಿ ಸಾಧು ಸಂಗವಾಗಲಿ

ಸಂಗವಾಗಲಿ ಸಾಧು ಸಂಗವಾಗಲಿ
ಸಂಗದಿಂದ ಲಿಂಗದೇಹ ಭಂಗವಾಗಲಿ
ಅಚ್ಯುತಾಂಘ್ರಿ ನಿಷ್ಠರ ಯದೃಚ್ಛಲಾಭ ತುಷ್ಟರ
ನಿಶ್ಚಯಾತ್ಮ ಜ್ಞಾನವುಳ್ಳ ಅಚ್ಚ ಭಾಗವತರ
ತಂತ್ರಸಾರ ಅಷ್ಟಮಹಾಮಂತ್ರ ಪರಿಪೂರ್ಣ ಸ್ನೇಹ
ಯಂತ್ರದಿಂದ ಬಿಗಿದು ಸ್ವತಂತ್ರಮೂರ್ತಿ ತಿಳಿದವರ
ಪಂಚಭೇದ ಕೃಷ್ಣರಾಯನ ಪಂಚಮೂರ್ತಿ ತಿಳಿದವರ

। ಶ್ರೀ ಕೃಷ್ಣಾರ್ಪಣ ಮಸ್ತು ।